ಒಎಸ್–260/2002

ಡಿ.ಡಬ್ಲ್ಯೂ -3

ದಿಃ 21-06-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ವಾದಿಯರು ಮತ್ತು 1 ನೇ ಪ್ರತಿವಾದಿ ರಾಯಪ್ಪ ಮತ್ತು ಮೃತ ಚೂನವ್ವ ಇವರ ಮಕ್ಕಳು ಎಂದರೆ ನಿಜ. ಈಗ ರಾಯಪ್ಪ ಮತ್ತು ಚೂನವ್ವ ತೀರಿಕೊಂಡಿದ್ದಾರೆ. ಅವರು ತೀರಿಕೊಂಡ ನಂತರ 3 ನೇ ವಾದಿ ಉಳಿದ ವಾದಿಯರನ್ನು ನೋಡಿಕೊಳ್ಳುತ್ತಾರೆಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಖರೀದಿ ಮಾಡಿದ ದಿನಾಂಕ ಗೊತ್ತಿಲ್ಲ. ನಾನು ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ಸರ್ವೆ ನಂ. 661/9 ಮತ್ತು 662/13 ಈ ಜಮೀನುಗಳು ಮೆಳವಂಕಿಯಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 661/9 ಮತ್ತು 662/13 ಇವು ರಾಯಪ್ಪನ ಹಿರಿಯರ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ರಾಯಪ್ಪ ಶೆಲತ್ಕಿ ಬಿಟ್ಟು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ. ಸರ್ವೆ ನಂ. 661/9 ಮತ್ತು 662/13 ರ ಹಿಸ್ಸೆಯನ್ನು ರಾಯಪ್ಪನು ರಾಮಪ್ಪ ಭೀಮಪ್ಪಾ ಕರೆವ್ವಗೋಳ ಇವರಿಗೆ ಖರೀದಿಗೆ ಕೊಟ್ಟನೆಂದರೆ ನನಗೆ ಗೊತ್ತಿಲ್ಲ. ಅದರಿಂದ ಬಂದ ಹಣದಿಂದ ರಾಯಪ್ಪ ದಾವಾ ಆಸ್ತಿಯನ್ನು ಖರೀದಿ ಮಾಡಿದನೆಂದರೆ ನಿಜ. ದಾವಾ ಆಸ್ತಿ ರಾಯಪ್ಪನ ಸ್ವಂತ ಆಸ್ತಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಿಂದ ಅರ್ಧ ಕಿ.ಮೀ. ದೂರದಲ್ಲಿ ನನ್ನ ಆಸ್ತಿ ಇದೆ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ ಪೈಪ್‌ಲೈನ್ ಹಾಕಿಸಿ ಕಬ್ಬನ್ನು ಬೆಳೆದ ಬಗ್ಗೆ ನಾನು ಕಾಗದ ಪತ್ರಗಳನ್ನು ನೋಡಿಲ್ಲ. ಡಿಡಬ್ಲ್ಯೂ-4 2 ನೇ ಪ್ರತಿವಾದಿಯ ಸಂಬಂಧಿಕನಲ್ಲ. ದಾವಾ ಆಸ್ತಿಯು ಈಗಲೂ ವಾದಿಯರ ಕಬ್ಜೆಯಲ್ಲಿದೆ ಎಂದರೆ ಗೊತ್ತಿಲ್ಲ. ನಾನು ಮೆಳವಂಕಿಯವನು ಅಲ್ಲ, ನನಗೆ ಈ ದಾವಾ ಆಸ್ತಿಯ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸುಳ್ಳು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳೆಲ್ಲ ಸುಳ್ಳು ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ